ನಿರ್ಧಾರ ಕೈಗೊಳ್ಳಲಾಯಿತು. 1990ನೇ ಇಸವಿಯಲ್ಲಿ ಈ ಯೋಜನೆ ಕ್ಲಿಯರ್ ಆಗಿ ಒಟ್ಟು 668 ನಿವೇಶನಗಳನ್ನು ಅಲ್ಲಿ ನಿರ್ಮಿಸಲಾಗಿದೆ. ಈ ಪೈಕಿ 319 ನಿವೇಶನಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ. ಉಳಿದಿರುವ 349 ನಿವೇಶನಗಳ ಕುರಿತಂತೆ ಅಲ್ಲಿನ ಮೂಲ ಜಮೀನಿನ ಮಾಲೀಕರು ತಕರಾರು ಸಲ್ಲಿಸಿದ್ದರು. ಅದಕ್ಕೋಸ್ಕರ, 2006ರಲ್ಲಿ ಪರಿಷ್ಕೃತ ಯೋಜನೆ ತಯಾರಿಸಲಾಯಿತು. ಈ ನಿವೇಶನಗಳಿಗೆ ಯಾವ ದರ ನಿಗದಿಪಡಿಸಬೇಕು ಮತ್ತು ಯಾವ ರೀತಿ ಹಂಚಬೇಕೆಂದು 2008ನೇ ಇಸವಿಯಿಂದ ತಮ್ಮ ಜಿಲ್ಲಾಧಿಕಾರಿಗಳ ಹತ್ತಿರ ಈ ವಿಚಾರ ಬಾಕಿ ಇದೆ. 349 ನಿವೇಶನಗಳ ಪೈಕಿ ಶೇಕಡಾ 50ರಷ್ಟನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೂ ಒಳಗೊಂಡಂತೆ Low Income Group ಯೋಜನೆಯಲ್ಲಿ ಅನುಷ್ಠಾನ ಗೊಳಿಸಬೇಕೆಂದಿದ್ದೇವೆ. ತಾವೂ ಕೂಡ ಕೂಡಲೇ ಯಾವ ದರವನ್ನು ನಿಗದಿಪಡಿಸಬೇಕೆಂದು ಪ್ರಸ್ತಾವನೆ ಕಳುಹಿಸಿಕೊಟ್ಟಲ್ಲಿ, ಅದಕ್ಕೆ ಸರ್ಕಾರದ ಕಡೆಯಿಂದ ನಾವು ಅನುಮೋದನೆ ನೀಡುತ್ತೇವೆ.

ಶ್ರೀ ಶ್ರೀಕಾಂತ್ ಕುಲಕರ್ಣಿ:– ಮಾನ್ಯ ಮಂತ್ರಿಗಳು ಹೇಳಿದಂತೆ ಈ ನಿವೇಶನಗಳನ್ನು ಬಹಿರಂಗವಾಗಿ ಹರಾಜು ಮೂಲಕ ಹಂಚಿಕೆ ಮಾಡುವುದರಿಂದ ನಗರ ಸಭೆಗೆ ಉತ್ಪನ್ನ ಬರುತ್ತದೆ. ಜಮಖಂಡಿಯಲ್ಲಿ ರಸ್ತೆಗಳು ಹಾಳಾಗಿವೆ. ಮೂಲಭೂತಸೌಕರ್ಯಗಳಿಲ್ಲ. ಆರ್ಥಿಕವಾಗಿ ಅತ್ಯಂತ ಶೋಚನೀಯವಾಗಿರುವ ಜಮಖಂಡಿ ನಗರಸಭೆಗೆ ಆರ್ಥಿಕ ಶಕ್ತಿಯನ್ನು ತುಂಬಬೇಕೆಂದರೆ ಮಾನ್ಯ ಸಚಿವರು ಅಲ್ಲಿಯ ಜಿಲ್ಲಾಧಿಕಾರಿಯವರಿಗೆ ಆದೇಶ ನೀಡಿ ಕಾನೂನಿನ ಚೌಕಟ್ಟಿನಡಿ ಅಲ್ಲಿರುವ ನಿವೇಶನಗಳನ್ನು ಮಾರಾಟ ಮಾಡಿಸಿಕೊಟ್ಟರೆ ಸಾರ್ವಜನಿಕರಿಗೆ ವ್ಯವಸ್ಥೆ ಮಾಡಿಕೊಟ್ಟಂತೆ ಆಗುತ್ತದೆ, ಮತ್ತೊಂದು ಆ ನಗರ ಸಭೆಗೆ ಆರ್ಥಿಕವಾಗಿ ಶಕ್ತಿಯನ್ನು ತುಂಬಿದಂತಾಗುತ್ತದೆ. ಇದನ್ನು ಮಾನ್ಯ ಸಚಿವರು ಮಾಡಬಹುದೊ ಹೇಗೆ?

ಶ್ರೀ ಎಸ್.ಸುರೇಶ್‌ಕುಮಾರ್:– ನಿವೇಶನದ ದರಪಟ್ಟಿಯನ್ನು ತರಿಸಿ ಅದರ ಸ್ವರೂಪವನ್ನು ನೋಡಿ ಮಾಡಿಸಿಕೊಡುತ್ತೇನೆ.

ಬೆಳಗಾವಿಯ ಸಂಪೂರ್ಣ ಅಭಿವೃದ್ಧಿಯ ಪ್ರಸ್ತಾವನೆ

23 (54) ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಸನ್ 1924ರಲ್ಲಿ ಬೆಳಗಾವಿಯಲ್ಲಿ ನಡೆದ 39ನೇ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷತೆಯನ್ನು

ವಹಿಸಿಕೊಂಡಿರುವ ಸವಿನೆನಪಿಗಾಗಿ ಬೆಳಗಾವಿಯ ಸಂಪೂರ್ಣ ಅಭಿವೃದ್ಧಿಗಾಗಿ ಸಿದ್ದಪಡಿಸಿದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ;

ಆ) ಕೇಂದ್ರ ಸರ್ಕಾರದ ಅನುದಾನವನ್ನು ಬಿಡುಗಡೆಗೊಳಿಸುವ ಕುರಿತು ಮಾನ್ಯ ಪ್ರಧಾನ ಮಂತ್ರಿಗಳೊಂದಿಗೆ ಚರ್ಚಿಸುವ ಉದ್ದೇಶವನ್ನು ಹೊಂದಲಾಗಿದೆಯೇ;

ಇ) ಹಾಗಿದ್ದಲ್ಲಿ, ದಿನಾಂಕ ಹಾಗೂ ಸಮಯವನ್ನು ನಿಗದಿಪಡಿಸಲಾಗಿದೆಯೇ ; ಇಲ್ಲವಾದಲ್ಲಿ, ಯಾವಾಗ ಪ್ರಧಾನ ಮಂತ್ರಿಗಳನ್ನು ಭೇಟಿಯ ಸಮಯವನ್ನು ಪಡೆಯಲಾಗುವುದು?

ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು):

ಅ) ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಸನ್ 1924ರಲ್ಲಿ ಬೆಳಗಾವಿಯಲ್ಲಿ ನಡೆದ 39ನೇ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ಸವಿನೆನಪಿಗಾಗಿ ಬೆಳಗಾವಿಯ ಸಂಪೂರ್ಣ ಅಭಿವೃದ್ಧಿಗಾಗಿ ಸಿದ್ದಪಡಿಸಿದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ದಿನಾಂಕ 10–02–2011 ರಂದು ಸಲ್ಲಿಸಲಾಗಿದೆ.

ಆ) ಮತ್ತು ಇ) ಮೇಲೆ ಹೇಳಿದ ಪತ್ರಕ್ಕೆ ಪ್ರತಿಕ್ರಿಯಿಸಿ ಭಾರತ ಸರ್ಕಾರದ ನಗರಾಭಿವೃದ್ಧಿ ಇಲಾಖೆಯಿಂದ ಪರಿಶೀಲಿಸಿದ್ದು, ಕೇಂದ್ರ ಸರ್ಕಾರವು ಯು.ಐ..ಡಿ.ಎಸ್.ಎಂ.ಟಿ.ಯೋಜನೆ ಅಡಿಯಲ್ಲಿ 2005–12ರ 7 ವರ್ಷಗಳ ಅವಧಿಗೆ ರಾಜ್ಯಕ್ಕೆ ರೂ.551.16 ಕೋಟಿ ರೂಗಳನ್ನು ನೀಡುವುದಾಗಿ ಮೀಸಲಿರಿಸಿದ್ದು, ಅದರಲ್ಲಿ 30 ಪಟ್ಟಣಗಳ 38 ಯೋಜನೆಗಳನ್ನು ನಿರ್ವಹಿಸಲಾಗುತ್ತಿದ್ದು ಈಗಾಗಲೇ ರೂ.443.14 ಕೋಟಿ ಹಣವನ್ನು ಹಂಚಿಕೆ ಮಾಡಿರುವುದಾಗಿ ತಿಳಿಸಿರುತ್ತಾರೆ ಹಾಗೂ ಕೇಂದ್ರದ ಹೆಚ್ಚುವರಿ ನೆರವು ಯೋಜನೆಯಡಿಯಲ್ಲಿ ರೂ.401.97 ಕೋಟಿ ಬಿಡುಗಡೆ ಮಾಡಲಾಗಿದೆ. ಈಗಾಗಲೇ ರಾಜ್ಯಕ್ಕೆ ಹಂಚಿಕೆಯಾದ ಹಣಕ್ಕಿಂತ ಹೆಚ್ಚುವರಿಯಾಗಿ ಬಿಡುಗಡೆ ಮಾಡಿರುವುದರಿಂದ ರಾಜ್ಯದ ಪಾಲಿನ ಹಂಚಿಕೆಯ ಹಣವನ್ನು ಹೆಚ್ಚು ಮಾಡುವುದರ ಹೊರತಾಗಿ ಹೊಸ ಯೋಜನೆಗಳಿಗೆ ಅನುಮತಿ ನೀಡಲು ಸಾಧ್ಯವಿಲ್ಲವೆಂದು ತಿಳಿಸಿದೆ.

ಶ್ರೀ ಅಭಯ್ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಾವು ಕೇಳಿರತಕ್ಕದ್ದು, ಮಹಾತ್ಮಾಗಾಂಧೀಜಿಯವರ ಜೀವಮಾನದಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷತೆಯನ್ನು ವಹಿಸಿದ್ದು ಒಂದೇ ಒಂದು ಸಲ. ಅದು ಬೆಳಗಾವಿಯಲ್ಲಿ ನಡೆದಿದ್ದಂಥ ಅಧಿವೇಶನ. ಅದರ ಸವಿನೆನಪಿಗಾಗಿ ಬೆಳಗಾವಿಯ ಅಭಿವೃದ್ಧಿಗಾಗಿ 5357 ಕೋಟಿ ರೂಪಾಯಿಯ ಯೋಜನೆಯನ್ನು

ತಯಾರು ಮಾಡಿ ರಾಜ್ಯ ಸರ್ಕಾರಕ್ಕೆ ನಾವು ಸಲ್ಲಿಸಿದ್ದೇವೆ. ಅದರಲ್ಲಿ 10% ನ್ನು ರಾಜ್ಯ ಸರ್ಕಾರ ಉಳಿದ 90%ನ್ನು ಕೇಂದ್ರ ಸರ್ಕಾರ ಕೊಡಬೇಕು ಎನ್ನುವಂಥ ನಿರ್ಣಯವನ್ನು ಕೈಗೊಂಡು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ್ದಾಗ, ಮುಖ್ಯಮಂತ್ರಿಯವರು ನಾವು ರಾಜ್ಯ ಸರ್ಕಾರದಿಂದ 10% ಹಣವನ್ನು ಬಿಡುಗಡೆ ಮಾಡುತ್ತೇವೆ, ಉಳಿದಂಥ 90% ಹಣವನ್ನು ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದು ಇಲ್ಲವೆ ಅವರನ್ನು ಭೇಟಿ ಮಾಡಿ ಈ ವಿಶೇಷ ಯೋಜನೆಯನ್ನು ಜಾರಿಗೆ ತರುವಂಥ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದರು. ಆದರೆ ಕೇಂದ್ರ ಸರ್ಕಾರದವರು ಪತ್ರವೊಂದನ್ನು ಬರೆದು ವಿಶೇಷವಾಗಿ ಕಮಲ್‌ನಾಥ್‌ರವರು 443 ಕೋಟಿ ರೂ.ಗಳನ್ನು ಈಗಾಗಲೆ ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ನಾನು ಒಂದು ವಿಚಾರವನ್ನು ಮಾನ್ಯ ಸಚಿವರ ಗಮನ ಸೆಳೆಯಲು ಇಚ್ಚೆಪಡುತ್ತೇನೆ. ಇದು ಒಂದು ವಿಶೇಷವಾದ ಯೋಜನೆಯೆಂದು ರಾಜ್ಯ ಸರ್ಕಾರ ಪರಿಗಣಿಸಿ ಒಂದು ಪತ್ರ ಬರೆದಿರುವುದನ್ನು ಇಲ್ಲಿ ಉಲ್ಲೇಖ ಮಾಡುತ್ತೇನೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು 1924 ರಲ್ಲಿ ಬೆಳಗಾವಿಯಲ್ಲಿ ನಡೆದ 39ನೇ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಸವಿನೆನಪಿಗಾಗಿ ಬೆಳಗಾವಿಯ ಸಂಪೂರ್ಣ ಅಭಿವೃದ್ಧಿಗಾಗಿ ಮಾನ್ಯ ಶಾಸಕರು ಬೆಳಗಾವಿ ದಕ್ಷಿಣ ಕ್ಷೇತ್ರ ಇವರು 'A City Development strategy and investment Plan for Belgaum city' ಎನ್ನುವ I-deck ರವರಿಂದ ತಯಾರಿಸಿರುವ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಮಾನ್ಯ ಮುಖ್ಯಮಂತ್ರಿಯವರು ದಿನಾಂಕ 10.02.2011ರಂದು ಮಾನ್ಯ ಪ್ರಧಾನ ಮಂತ್ರಿಯವರಿಗೆ ಪತ್ರವನ್ನು ಬರೆದು ಈ ಯೋಜನೆಯನ್ನು ಒಂದು ವಿಶೇಷ ಯೋಜನೆಯಾಗಿ ಕೇಂದ್ರ ಸರ್ಕಾರ 2011–12ರ ಬಜೆಟ್‌ನಲ್ಲಿ ಸೇರಿಸುವಂತೆ ಮತ್ತು ಈ ಯೋಜನೆಗೆ ರಾಜ್ಯ ಸರ್ಕಾರವು ತನ್ನ ಪಾಲಿನ 10% ಹಣವನ್ನು ನೀಡುವುದಾಗಿ ಕೋರಿರುತ್ತಾರೆ. ಇಷ್ಟೆಲ್ಲಾ ಆಗಿದ್ದರು ಮಾನ್ಯ ಕಮಲ್‌ನಾಥ್‌ರವರು ಮಾನ್ಯ ಮುಖ್ಯಮಂತ್ರಿಯವರ ಪತ್ರವನ್ನು ಸರಿಯಾಗಿ ಓದದೆಯೇ ಇದು ಒಂದು ವಿಶೇಷವಾದ ಯೋಜನೆ, ಇದನ್ನು ಏಕೆ ನಾವು ತಯಾರು ಮಾಡಿದ್ದೇವೆಂದರೆ, ಕರ್ನಾಟಕದ ಇತಿಹಾಸದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಒಂದೇ ಸಲ ಆಗಿದ್ದು, ಅದೂ ಬೆಳಗಾವಿಯಲ್ಲಿ. ಮಹಾತ್ಮ ಗಾಂಧೀಜಿಯವರು ಒಂದೇ ಸಲ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷತೆಯನ್ನು ವಹಿಸಿದ್ದು, ಅದೂ ಬೆಳಗಾವಿಯಲ್ಲಿಯೇ. ಇದೇ ರೀತಿ ನಾದ್ಯಾಡದಲ್ಲಿ ಸಿಖ್‌ಧರ್ಮದ ಕೊನೆಯ ಗುರುಗಳು ಭೇಟಿ ಕೊಟ್ಟ 300 ವರ್ಷಗಳ ಸವಿನೆನಪಿಗಾಗಿ ಸುಮಾರು 400

ಕೋಟಿ ರೂಪಾಯಿಗಳನ್ನು ವಿಶೇಷ ನಿಧಿಯೆಂದು ಕೇಂದ್ರ ಸರ್ಕಾರ ನಾದ್ಯಾಡದ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದೆ. ಅದೇ ರೀತಿ ನಮಗೂ ಬಿಡುಗಡೆ ಮಾಡಿಯೆಂದು ಕೇಂದ್ರ ಸರ್ಕಾರವನ್ನು ಕೇಳಿದಾಗ ಅವರು ಈ ರೀತಿ ಉತ್ತರ ಕೊಟ್ಟಿದ್ದಾರೆ. ನನಗೆ ಅನ್ನಿಸಿದ ಮಟ್ಟಿಗೆ ಕಮಲ್‌ನಾಥ್‌ರವರು ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರ ಹೆಸರು ಇದಿದ್ದರಿಂದ ಸರಿಯಾಗಿ ನೋಡಿಲ್ಲ, ಬೇರೆ ಗಾಂಧಿಯವರ ಹೆಸರು ಇದ್ದರೆ ಬಹುಶಃ ನೋಡಿ ಉತ್ತರ ಕೊಡುತ್ತಿದ್ದರು! ಆದ್ದರಿಂದ ಮಾನ್ಯ ಮುಖ್ಯಂತ್ರಿಯವರು ಈ ಬಗ್ಗೆ ನಮ್ಮ ಜಿಲ್ಲೆಯ ಶಾಸಕರು, ಉಸ್ತುವಾರಿ ಸಚಿವರು ಮತ್ತು ಲೋಕಸಭಾ ಸದಸ್ಯರನ್ನೊಳಗೊಂಡ ಒಂದು ನಿಯೋಗ ತೆಗೆದುಕೊಂಡು ಹೋಗಿ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ಈ ಯೋಜನೆಯನ್ನು ಜಾರಿಗೆ ತರಲು ವಿಶೇಷವಾದ ಆಸಕ್ತಿಯನ್ನು ವಹಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹಪಡಿಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ಅಭಯ್ ಪಾಟೀಲರು ಯಾವ ರೀತಿಯಲ್ಲಿ ಐತಿಹಾಸಿಕ ಹಿನ್ನೆಲೆಯುಳ್ಳ ಬೆಳಗಾವಿಯನ್ನು ಮುಂದಿನ ದಿವಸಗಳಲ್ಲಿ ಅಭಿವೃದ್ಧಿಗೊಳಿಸಬೇಕು ಎನ್ನುವ ಬಗ್ಗೆ ಈಗಾಗಲೆ ಸುದೀರ್ಘವಾದ ಪ್ರಸ್ತಾಪವನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆ ಪ್ರಸ್ತಾಪದ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು 10.02.2011ರಂದು ಪ್ರಧಾನ ಮಂತ್ರಿಯವರಿಗೆ ಬಹಳ ದೀರ್ಘವಾದ ಪತ್ರವೊಂದನ್ನು ಬರೆದು, 1924ನೇ ಇಸವಿಯಲ್ಲಿ ಯಾವ ರೀತಿಯಾಗಿ ಮಹಾತ್ಮಾಗಾಂಧೀಜಿಯವರು ಬೆಳಗಾವಿಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ಏಕೈಕಬಾರಿ ವಹಿಸಿದ್ದರು, ಅದೇ ರೀತಿ ಬೆಳಗಾಂನಲ್ಲಿ ಸ್ವಾಮಿ ವಿವೇಕಾನಂದರು ಸಹ ಇದ್ದಾಗ World Parliament of Religions ಗೆ ಹೋಗಬೇಕು ಎನ್ನುವ ನಿರ್ಧಾರ ಹೇಗೆ ಮಾಡಿದರೊ ಎಂಬುದನ್ನೆಲ್ಲಾ ಸುದೀರ್ಘವಾಗಿ ಮಂಡಿಸಿ ಕಳಹಿಸಿದ್ದಾರೆ. ಕೆಂದ್ರದ ನಗರಾಭಿವೃದ್ಧಿ ಸಚಿವರು ಈ ಪತ್ರದ ಮಹತ್ವದ ಹಿನ್ನೆಲೆಯಲ್ಲಿ ಈಗಾಗಲೆ ನಮ್ಮ ಹತ್ತಿರ ಪೂರ್ಣ ಹಣ ಖರ್ಚು ಆಗಿರುವುದರಿಂದ ಯಾವುದೇ ಹೊಸ ಯೋಜನೆ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲವೆಂದು 25.03.2011 ರಂದು ಪತ್ರವನ್ನು ಬರೆದಿದ್ದಾರೆ. ಆದರೆ ಅಭಯ್‌ಪಾಟೀಲರು ಹೇಳುತ್ತಿರುವ ಹಿನ್ನೆಲೆಯಲ್ಲಿ ಬೆಳಗಾವಿಯ ಅಭಿವೃದ್ಧಿಯ ದೃಷ್ಟಿಯಿಂದ ಅದರ ಮಹತ್ವವನ್ನು ಅರಿತು ಪ್ರಧಾನ ಮಂತ್ರಿಯವರನ್ನು ಮತ್ತು ಕೇಂದ್ರ ಸರ್ಕಾರವನ್ನು ಭೇಟಿ ಮಾಡುವುದಕ್ಕೆ ರಾಜ್ಯ ಸರ್ಕಾರ ಇನ್ನೂ ಹೆಚ್ಚು ಪ್ರಯತ್ನ ಪಡುತ್ತದೆ.

ಅಗತ್ಯವಿದ್ದಲ್ಲಿ ಪ್ರಧಾನ ಮಂತ್ರಿಯವರನ್ನು ಖುದ್ದಾಗಿ ಭೇಟಿ ಮಾಡಿ ಯೋಜನೆಗೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ಕೇಳುತ್ತೇವೆ.

ಶ್ರೀ ಅಭಯ್‌ಪಾಟೀಲ್:- ಅಗತ್ಯ ಬಿದ್ದರೆ ಎಂಬುದಲ್ಲ, ಇದು ಒಂದು ಐತಿಹಾಸಿಕ ಘಟನೆ. ನಮ್ಮ ಜಿಲ್ಲೆಯ ಶಾಸಕರು ಮತ್ತು ಜನಪ್ರತಿನಿದಿಗಳೆಲ್ಲರು ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ನೀವು ಯಾವತ್ತು ಹೋಗುತ್ತೀರಿ ಎಂಬ ಬಗ್ಗೆ ದಿನಾಂಕವನ್ನು ಇವತ್ತು ತಿಳಿಸಬೇಕಾಗುತ್ತದೆ. ನಾವು ಹೋಗುತ್ತೇವೆಂದು ಸರ್ಕಾರ ಆಶ್ವಾಸನೆ ಕೊಡಬೇಕಾಗುತ್ತದೆ. ಇಂಥ ಐತಿಹಾಸಿವಾದ ಘಟನೆಯನ್ನು ಕೇಂದ್ರ ಸರ್ಕಾರದಲ್ಲಿರುವ ಮಂತ್ರಿಯವರು ಬರೆದಿರುವ ಪತ್ರವನ್ನು ನೋಡಿದರೆ ಮಹಾತ್ಮಾಗಾಂಧೀಜಿಯವರಿಗೆ ಅಪಚಾರ ಮಾಡಿರುವಂತೆ ಕಂಡುಬರುತ್ತದೆ. ಆದ್ದರಿಂದ ಈ ಯೋಜನೆಯನ್ನು ಜಾರಿಗೆ ತರುವ ಸಲುವಾಗಿ ಈ ಸದನದಲ್ಲಿ ನಿರ್ಣಯವನ್ನು ಕೈಗೊಳ್ಳಬೇಕೆಂದು ಆಗ್ರಹ ಮಾಡುತ್ತೇನೆ.

ಶ್ರೀ ಶ್ರೀಕಾಂತ್ ಕುಲಕರ್ಣಿ:- ಮಾನ್ಯ ಅಭಯ್ ಪಾಟೀಲರು ಇಲ್ಲಿ ಪ್ರಸ್ತಾಪ ಮಾಡಿರುವ ಸಲಹೆ ಬಹಳ ಯೋಗ್ಯವಾಗಿದೆ. ಉತ್ತರ ಕರ್ನಾಟಕ ಅದರಲ್ಲೂ ವಿಶೇಷವಾಗಿ ಮುಂಬೈ ಕರ್ನಾಟಕದ ಬೆಳಗಾವಿಯಲ್ಲಿ 1924 ರಲ್ಲಿ ಮಹಾತ್ಮಾಗಾಂಧಿಜೀಯವರ ಅಧ್ಯಕ್ಷತೆಯಲ್ಲಿ ಐತಿಹಾಸಿ ಸಮ್ಮೇಳನ ನಡೆದು ಆವತ್ತಿವ ಸರ್ಕಾರ ಆ ನಗರದ ಅಭಿವೃದ್ದಿಯ ಬಗ್ಗೆ ಏನು ಆಶ್ವಾಸನೆಯನ್ನು ಕೊಟ್ಟಿತು ಅದರ ಬಗ್ಗೆ ಕೇಂದ್ರ ಸರ್ಕಾರ ಮಲತಾಯಿದೋರಣೆ ತೋರದೆ ಅದನ್ನು ಜಾರಿಗೆ ತರಬೇಕು ಎನ್ನುವ ದೃಷ್ಟಿಯಿಂದ ಇಡೀ ಸದನ ಒಮ್ಮತದ ನಿರ್ಣಯ ಮಾಡಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್:- ಕೇಂದ್ರಕ್ಕೆ ನಿಯೋಗವನ್ನು ಕರೆದೊಯ್ದು ಪ್ರಧಾನ ಮಂತ್ರಿಯವರಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಇದರ ಮಹತ್ವವನ್ನು ತಿಳಿಸುವ ಪ್ರಯತ್ನವನ್ನು ರಾಜ್ಯ ಸರ್ಕಾರದಿಂದ ಖಂಡಿತಾ ಮಾಡುತ್ತೇವೆ. ಅದರ ದಿನಾಂಕವನ್ನು ನಿಶ್ಚಯ ಮಾಡಿ ಬೆಳಗಾಂ ಜಿಲ್ಲೆಯ ಎಲ್ಲಾ ಶಾಸಕರಿಗೆ ವಿಶೇಷವಾಗಿ ಅಭಯ್ ಪಾಟೀಲ್‌ರವರಿಗೆ ತಿಳಿಸುತ್ತೇವೆ. ಇಲ್ಲಿ ಇದರ ಬಗ್ಗೆ ಏನು ನಿರ್ಣಯ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ ಅದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಿ ಮುಂದಿನ ದಿನಗಳಲ್ಲಿ ನಿರ್ಣಯವನ್ನೂ ಕೂಡ ಅಂಗೀಕರಿಸುತ್ತೇವೆ.